**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No. 133/2021**

| | | | |
|---|---|---|---|
| **ಸಾಕ್ಷಿಯ ಹೆಸರು** | : | ಹೆಚ್. ಕೆ. ಮಲ್ಲರಾಜು | **PW.** 05 |
| **ತಂದೆಯ ಹೆಸರು** | : | ಹೆಚ್. ಎಂ. ಕರಿಯಪ್ಪ | **CW.**07 |
| **ವಯಸ್ಸು** | : | **52 ವರ್ಷಗಳು** | |
| **ಉದ್ಯೋಗ** | : | ವ್ಯವಸಾಯ | |
| **ವಾಸಸ್ಥಳ** | : | ಹತ್ತವಾಳು, ಹೆಚ್. ಡಿ. ಕೋಟೆ | |

ದಿನಾಂಕ **10.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ಆರೋಪಿತಗಳನ್ನು ನಾನು ನೋಡಿಲ್ಲ. ನನ್ನ ಸಮಕ್ಷಮ ಆರೋಪಿತರನ್ನು ಪೊಲೀಸ್ ಠಾಣೆಯಲ್ಲಿ ಅಂಗಶೋಧನೆ ಮಾಡಿ , ಅವರ ಬಳಿ ಹಣ ಇತರೆ ವಸ್ತುಗಳನ್ನು ಜಪ್ತಿ ಮಾಡಿಲ್ಲ. ಆದರೆ ಆರು ಪಂಚನಾಮೆಗಳಿಗೆ ಪೊಲೀಸರು ನನ್ನ ಸಹಿ ಪಡೆದರು. ಅವುಗಳನ್ನು ಈಗ ನೋಡುತ್ತಿದ್ದು, ನಿಪಿ-7 ರಿಂದ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ರಿಂದ 12(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಗಳಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಮತ್ತು ಆರೋಪಿತರಿಂದ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**SC No. 133/2021**
**PW. 5**

**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**

ದಿಃ 22–11–2019 ರಂದು ನ್ಯಾಯಾಲಯದ ಮುಂದಿರುವ ಮೂರು ಜನಆರೋಪಿತರನ್ನು ಮತ್ತು ಇತರೆ ಮೂರು ವ್ಯಕ್ತಿಗಳನ್ನು ಪೊಲೀಸರು ದರೋಡೆ ಪ್ರಕರಣದಲ್ಲಿ ದಸ್ತಗಿರಿ ಮಾಡಿ ಠಾಣೆಯಲ್ಲಿ ಅವರ ಅಂಗ ಶೋಧನೆ ಮಾಡಿ, 1 ನೇ ಆರೋಪಿ ಬಳಿ ಇದ್ದ 1500/– ರೂ ಹಣ , ನಂಜುಂಡ ಮೂರ್ತಿ ಯಿಂದ ಒಂದು ನೋಕೀಯಾ ಮೊಬೈಲ್ ಮತ್ತು 1650/– ರೂ ಹಣ , 2 ನೇ ಆರೋಪಿ ಬಳಿ ಇದ್ದ 1800/– ರೂ ಹಣ , ನಿಸಾಕ್ ಅಹಮದ್ ನಿಂದ ಇದ್ದ 1600/– ರೂ ಹಣ , 3 ನೇ ಆರೋಪಿ ಬಳಿ ಇದ್ದ 1700/– ರೂ ಹಣ ,4 ನೇ ಆರೋಪಿ ಬಳಿ ಇದ್ದ 1700/– ರೂ ಹಣ ವನ್ನು ವಶಪಡಿಸಿಕೊಂಡು , ಪ್ರತ್ಯೇಕವಾಗಿ ರಾತ್ರಿ 8.30 ರಿಂದ 11.30 ವರೆಗೆ ಆರು ಮಹಜರ್ ಗಳನ್ನು ನಿಪಿ–7 ರಿಂದ 12 ರಂತೆ ನನ್ನ ಸಮಕ್ಷಮ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ–7 ಮತ್ತು 12 ರ ಬಗ್ಗೆ ಮುದ್ದೆಮಾಲುಗಳ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿತರ ಪರ ವಕೀಲರಿಂದಃ–**

ಏನೂ ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

**sd**/–

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.